ಅ)

ವಿವರಗಳು	೧೯೮೪		೧೯೮೫		೧೯೮೬	
	ಸಂಖ್ಯೆ	ಮಾನವದಿನ ನಷ್ಟ	ಸಂಖ್ಯೆ	ಮಾನವದಿನ ನಷ್ಟ	ಸಂಖ್ಯೆ	ಮಾನವದಿನ ನಷ್ಟ
೧	೨	೩	೪	೫	೬	೭
ಮುಷ್ಕರ	೩೨	೫೮೭೦೨೬	೨೫	೩೮೪೫೦೪	೩೧	೧೨೧೭೬೭
ಬೀಗಮುದ್ರೆ	೭	೩೦೧೧೫೫	೮	೬೨೮೨೫	೬	೯೪೯೬೦
ವಿಸರ್ಜನೆ	೨೫	೬೧೬೫೩	೨೦	೧೩೩೨೫೯	೨೪	೩೭೩೩೫೪

ವಿವರಣೆಗಳು	೧೯೮೪		೧೯೮೫		೧೯೮೬	
	ಪ್ರಕರಣಗಳ ಸಂಖ್ಯೆ	ಭಾದಿತ ಕೆಲಸಗಾರರ ಸಂಖ್ಯೆ	ಪ್ರಕರಣಗಳ ಸಂಖ್ಯೆ	ಭಾದಿತ ಕೆಲಸಗಾರರ ಸಂಖ್ಯೆ	ಪ್ರಕರಣಗಳ ಸಂಖ್ಯೆ	ಭಾದಿತ ಕೆಲಸಗಾರರ ಸಂಖ್ಯೆ
೧	೨	೩	೪	೫	೬	೭
ಮುಚ್ಚುವಿಕೆ ತೆಗೆದು	೧	೫೨	೨	೫೨೧	೧	೩೦
ಹಾಕುವಿಕೆ	೨	೫೫	೨	೧೪	—	—

ಆ) ಕೈಗಾರಿಕೆ ಮತ್ತು ಕಾರ್ಮಿಕ ವರ್ಗಗಳಿಗೆ ಅನ್ವಯವಾಗುವ ಕಾಯಿದೆಗಳ ಕೆಳಗೆ ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿದೆ. ಅವುಗಳು

೧. ವಿವಾದ ಬಗೆಹರಿಸಲು ಸಂಧಾನ ನಡೆಸುವುದು.

೨. ಸಂವಿಧಾನ ವಿಫಲವಾದಲ್ಲಿ ವಿವಾದವನ್ನು ಕಾರ್ಮಿಕ ನ್ಯಾಯಾಲಯಕ್ಕೆ ತೀರ್ಪಿಗೆ ಒಪ್ಪಿಸುವುದು.

೩. ಮುಷ್ಕರ, ಲಾಕೌಟ್ ಅವುಗಳನ್ನು ಕಾಲಕಾಲಕ್ಕೆ ನಿಷೇದಿಸುವುದು.

೪. ಕೈಗಾರಿಕೆಗಳು ತಮ್ಮ ಉದ್ಯಮಗಳನ್ನು ಮುಚ್ಚಲು ಅನುಮತಿ ನಿರಾಕರಿಸುವುದು.

೫. ಹಣ ಸಹಾಯ ಮತ್ತಿತರ ಸಹಾಯ ಒದಗಿಸುವುದು.

ಅನುಮತಿ ನಿರಾಕರಣೆಯ ಆಜ್ಞೆಯನ್ನು ಕೆಲವು ಉದ್ಯಮಿಗಳು ರಾಜ್ಯದ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿ ಆದು ರಾಜ್ಯಾಂಗಬಾಹಿರವೆಂದು ತೀರ್ಪು ಆಗಿದೆ. ಈ ಬಗ್ಗೆ ಕೇಂದ್ರ ಮತ್ತು ರಾಜ್ಯದ ಮನವಿಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ಅಂತಿಮ ಇತ್ಯರ್ಥಕ್ಕಾಗಿ ಇದೆ.

ರಾಜ್ಯದಲ್ಲಿರುವ ಅಂಗನವಾಡಿಗಳ ಬಗ್ಗೆ

೨ (ಸಿ) ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ)—.ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು ? ಹಾಗೂ ಇದರಲ್ಲಿರುವ ಉದ್ಯೋಗಿಗಳ ಸಂಖ್ಯೆ ಎಷ್ಟು ?

೨) ಇಲ್ಲಿನ ಉದ್ಯೋಗಿಗಳಿಗೆ ಸರ್ಕಾರದವರು ಕೊಡುತ್ತಿರುವ ವೇತನ ಎಷ್ಟು ? ಮತ್ತು ಇವರುಗಳಿಗೆ ವಸತಿ ಸೌಲಭ್ಯ ಕಲ್ಪಿಸಲಾಗಿದೆಯೇ ?

ಅ) ಅಂಗನವಾಡಿಗಳಲ್ಲಿ ಸರಕಾರದವರು ಮಕ್ಕಳಿಗೆ ಕಲ್ಪಿಸಿಕೊಡುತ್ತಿರುವ ಸೌಲಭ್ಯಗಳೇನು ?

ಶ್ರೀ ಜಿ. ಬಸವಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿಗಳ ಸಂಖ್ಯೆ ೧೨,೨೬೪ ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ.—

ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ — ೧೨,೨೬೪
ಅಂಗನವಾಡಿ ಸಹಾಯಕಿಯರ ಸಂಖ್ಯೆ — ೧೨,೨೬೪

ಆ) ಇಲ್ಲಿನ ಉದ್ಯೋಗಿಗಳಿಗೆ ವೇತನ ನೀಡುತ್ತಿಲ್ಲ. ಆದರೆ ಇವರುಗಳಿಗೆ ಈ ಕೆಳಕಂಡಂತೆ ಗೌರವ ಧನವನ್ನು ನೀಡಲಾಗುತ್ತಿದೆ.

೧. ಎಸ್. ಎಸ್. ಎಲ್. ಸಿ. ಉತ್ತೀರ್ಣರಾಗಿರುವ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ. ೨೫೦-೦೦ ಮಾಸಿಕ.

೨. ಎಸ್. ಎಸ್. ಎಲ್. ಸಿ. ಇಲ್ಲದ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ. ೨೦೦-೦೦ ಮಾಸಿಕ.

೩. ಅಂಗನವಾಡಿ ಸಹಾಯಕಿಯರಿಗೆ ರೂ. ೯೦-೦೦ ಮಾಸಿಕ
ಇವರುಗಳಿಗೆ ವಸತಿ ಸೌಲಭ್ಯ ಕಲ್ಪಿಸಿಲ್ಲ.

ಇ) ಅಂಗನವಾಡಿಗಳಲ್ಲಿ ಮಕ್ಕಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

೧. ಪೂರಕ ಪೌಷ್ಟಿಕ ಆಹಾರ
೨. ಅನೌಪಚಾರಿಕ ಶಾಲಾ ಪೂರ್ವ ಶಿಕ್ಷಣ
೩. ಆರೋಗ್ಯ ಪರಿಶೀಲನೆ
೪. ರೋಗನಿರೋಧಕ ಚುಚ್ಚು ಮದ್ದು ನೀಡುವಿಕೆ
೫. ಸಲಹಾ ಸೇವೆ

ಶಿಕಾರಿಪುರ ತಾಲ್ಲೂಕಿನಲ್ಲಿ ಉಡುಗಣಿಗೆ ಬದಲು ಶಿರಾಳ ಕೊಪ್ಪನಾಡ ಕಚೇರಿಯನ್ನು ಪ್ರಾರಂಭಿಸುವ ಬಗ್ಗೆ

೫ (೧೯೯) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕೆಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ''ಉಡುಗೆರೆ'' ಯಲ್ಲಿ ನಾಡ ಕಚೇರಿ ಪ್ರಾರಂಭಿಸುವುದರ ಬದಲಿಗೆ ''ಶಿರಾಳಕೊಪ್ಪ'' ದಲ್ಲಿ ನಾಡ ಕಚೇರಿಯನ್ನು ಪ್ರಾರಂಭಿಸುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಏನಾದರೂ ಕ್ರಮ ಕೈಗೊಂಡಿದ್ದಾರೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಸರ್ಕಾರಿ ಆದೇಶ ಆರ್ಡಿ ೬೫ ಎಎಸ್‌ಡಿ ೮೯ ದಿನಾಂಕ ೧೪-೭-೮೮ರಲ್ಲಿ ಶಿಕಾರಿಪುರ ತಾಲ್ಲೂಕಿನ ತಲಗುಂದ ಹೋಬಳಿಯಲ್ಲಿ ನಾಡ ಕಚೇರಿಯನ್ನು ಪ್ರಾರಂಭಿಸಲಾಗಿದೆ. ಸದರಿ ನಾಡ ಕಚೇರಿಯನ್ನು ಉಡುಗಣಿಗಾಗಲೀ ಅಥವಾ ಶಿರಾಳಕೊಪ್ಪಕ್ಕಾಗಲಿ ಸ್ಥಳಾಂತರಿಸುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ಯಾವ ಪ್ರಸ್ತಾವನೆಯೂ ಬಂದಿರುವುದಿಲ್ಲ.